> ಇಪ್ಪತ್ತೊಂಬತ್ತನೆಯ ವಯಸ್ಸಿನಲ್ಲಿ ಕಾದಂಬರಿ ಬರೆಯಲು ಶುರುಮಾಡಿದೆ. ಜಪಾನಿ ಭಾಷೆಯಲ್ಲಿ ಹೇಗೆ ಬರೆಯುವುದು ಗೊತ್ತಿರಲಿಲ್ಲ. ಜಪಾನಿ ಲೇಖಕರನ್ನು ಓದೇ ಇರಲಿಲ್ಲ. ಓದಿದ್ದ ಪಾಶ್ಚಾತ್ಯ ಪುಸ್ತಕಗಳಿಂದ ಶೈಲಿ, ಸ್ವರೂಪ ಎಲ್ಲವನ್ನೂ ಎರವಲಾಗಿ ತೆಗೆದುಕೊಂಡೆ. ಆದರ ಮೂಲಕ ನನ್ನದೇ ಶೈಲಿಯನ್ನು ರೂಪಿಸಿಕೊಂಡೆ.



ನನ್ನ ನಾಯಕ ಯಾವಾಗಲೂ ಆಧ್ಯಾತ್ಮಿಕ ಹಾಗೂ ವಾಸ್ತವಿಕ ಜಗತ್ತಿನ ನಡುವೆ ಸಿಕ್ಕಿಹಾಕಿಕೊಂಡಿರುತ್ತಾನೆ. ಆಧ್ಯಾತ್ಮಿಕ ಜಗತ್ತಿನಲ್ಲಿ ಹೆಣ್ಣು ಇಲ್ಲವೇ ಗಂಡು ಸಾಧಾರಣವಾಗಿ ಬುದ್ಧಿವಂತರು, ಮೌನಿಗಳು ಆಗಿರುತ್ತಾರೆ. ವಾಸ್ತವಿಕ ಜಗತ್ತಿನಲ್ಲಿ ನೀವು ಹೇಳಿದಂತೆ ಹೆಣ್ಣುಗಳು ಕ್ರಿಯಾಶೀಲರಾಗಿ, ತಮಾಷೆಯಾಗಿ ಇತ್ಯಾತ್ಮಕ ಮನೋಭಾವದವರಾಗಿರುತ್ತಾರೆ. ಅವರಿಗೆ ಒಳ್ಳೆಯ ಹಾಸ್ಯಪ್ರಜ್ಞೆ ಇರುತ್ತದೆ. ನಾಯಕನ ಮನಸ್ಸು ಈ ಎರಡು ಜಗತ್ತುಗಳ ನಡುವೆ ಹಂಚಿಹೋಗಿರುತ್ತದೆ. ಅವನು ಈ ಎರಡರಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳಲಾರ. ಬಹುಶಃ ಅದು ನನ್ನ ಕೃತಿಯ ಮುಖ್ಯ ಉದ್ದೇಶಗಳಲ್ಲಿ ಒಂದು. 'Hard–Boiled Wonderland'ನಲ್ಲಿ ನಾಯಕನ ಮನಸ್ಸು, ದೇಹ ಇಬ್ಭಾಗವಾಗಿದೆ. 'Norwegian Wood'ನಲ್ಲಿ ಇಬ್ಬರು ಹುಡುಗಿಯರು ಬರುತ್ತಾರೆ. ಆರಂಭದಿಂದ ಕೊನೆಯವರೆಗೂ ಇಬ್ಬರಲ್ಲಿ ಒಬ್ಬರನ್ನು ಆಯ್ಕೆಮಾಡಿಕೊಳ್ಳಲಾರ.

◆ ನಮ್ಮ ಮನಸ್ಸು ಯಾವಾಗಲೂ ಹಾಸ್ಯಪ್ರಜ್ಞೆಯಿರುವ ಹುಡುಗಿಯ ಕಡೆಗೆ ವಾಲುತ್ತದೆ. ಹಾಸ್ಯವೇ ಓದುಗರನ್ನು ಆ ಪಾತ್ರದೊಂದಿಗೆ ಬೆಸೆಯುತ್ತದೆ. 'Norwegian Wood' ಕಾದಂಬರಿ ಓದುವಾಗ ಅದರಲ್ಲಿನ ಮಿಡೋರಿ ಪಾತ್ರ ಹೆಚ್ಚು ಆಪ್ತವೆನಿಸಿತು.

ಬಹುತೇಕ ಎಲ್ಲ ಓದುಗರು ಇದನ್ನೇ ಹೇಳುತ್ತಾರೆ. ಎಲ್ಲರಿಗೂ ಮಿಡೋರಿ ಪಾತ್ರ ಇಷ್ಟವಾಗುತ್ತದೆ. ಅದರ ನಾಯಕ ಕೂಡ ಕಡೆಯಲ್ಲಿ ಅವಳನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಆದರೆ, ಅವನ ವ್ಯಕ್ತಿತ್ವದ ಒಂದು ಭಾಗ ಯಾವಾಗಲೂ ಮತ್ತೊಂದು ಲೋಕದಲ್ಲಿರುತ್ತದೆ. ಅದನ್ನು ಅವನು ತಳ್ಳಿಹಾಕಲಾರ. ಅದು ಅವನದೇ ಭಾಗ. ಎಲ್ಲ ಮನುಷ್ಯರ ಮನಸ್ಸಿನೊಳಗೂ ಈ ರೀತಿ ಇರುತ್ತದೆ. ಅದು ಅವರ ವ್ಯಕ್ತಿತ್ವದ ಭಾಗವಾಗಿರುತ್ತದೆ. ಮನಸ್ಸಿನೊಳಗೆ ವಿವೇಕ ಒಂದೆಡೆಯಿದ್ದರೆ ಹುಚ್ಚುತನ ಮತ್ತೊಂದೆಡೆ ಇರುತ್ತದೆ. ನಾವು ಇವೆರೆಡರ ನಡುವೆ ಜೀಕುತ್ತಿರುತ್ತೇವೆ ಎನ್ನುವುದು ನನ್ನ ನಂಬಿಕೆ. ಬರೆಯುವಾಗ ನನ್ನ ಮನಸ್ಸಿನ ಹುಚ್ಚುತನ ಹೆಚ್ಚಾಗಿ ಅನುಭವಕ್ಕೆ ಬರುತ್ತದೆ. ಹುಚ್ಚುತನ ಎನ್ನುವುದಕ್ಕಿಂತ ಅಸಾಮಾನ್ಯ, ಅವಾಸ್ತವ ಎನ್ನಬಹುದು. ವಾಸ್ತವ ಜಗತ್ತಿಗೆ ಮರಳಬೇಕೆಂದಾಗ ನನ್ನಲ್ಲಿನ ಜಾಗೃತ ಮನಸ್ಸನ್ನು ಆಯ್ಕೆ ಮಾಡಿಕೊಳ್ಳುತ್ತೇನೆ. ಆದರೆ, ಹುಚ್ಚುತನವಿಲ್ಲದೆ ಇರಲಾರೆ. ಅದನ್ನೇ ಮತ್ತೊಂದು ರೀತಿ ಹೇಳಬೇಕೆಂದರೆ ನಾಯಕನ ಬೆನ್ನೆಲುಬಾಗಿ ಇಬ್ಬರು ಹೆಣ್ಣುಗಳಿರುತ್ತಾರೆ. ಇವರಿಬ್ಬರಲ್ಲಿ ಯಾರನ್ನೂ ಬಿಟ್ಟಿರಲಾರ. ಆ ದೃಷ್ಟಿಯಿಂದ ನೋಡಿದಾಗ 'Norwegian Wood' ನನ್ನ ಬರವಣಿಗೆಯ ರೀತಿಗೆ ಉದಾಹರಣೆ.